# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## Misc.06/2022

**ಸಾಕ್ಷಿಯನ್ನು ದಿಃ 15.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಕೆ.ಸಿ.ಬಿ. ಪರ ಕುಮಾರಿ ಸಿ.ಎ.ಜೆ. ವಕೀಲರಿಂದಃ-

ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಓದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನನ್ನ ತಾಯಿ ನೀಡಿದ್ದಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ನನ್ನ ವಕೀಲರಿಂದ ಕೇಳಿ ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೇನೆ. ಈ ಪ್ರಕರಣದಲ್ಲಿ ನನ್ನ ತಾಯಿಯ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಈ ಅರ್ಜಿಯಲ್ಲಿ ನಮಗೆ ಜಮೀನು ಬಿಡಿಸಿಕೊಡಬೇಕೆಂದು ಪರಿಹಾರ ಕೇಳಿದ್ದೇನೆ. ಈ ಅರ್ಜಿಯಲ್ಲಿ ಏನು ಪರಿಹಾರ ಕೇಳಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಗೊತ್ತಿದೆ. ಅಸಲು ದಾವೆ ಸಂಖ್ಯೆಃ **82/2018** ರ ದಾವೆಯ ಬಗ್ಗೆ ಗೊತ್ತಿದೆ. ಸದರಿ ದಾವೆ ವಜಾಗೊಂಡಿದೆ. ಸದರಿ ದಾವೆ ನಡೆಯುತ್ತಿರುವಾಗ ಅದರ ವಿದ್ಯಾಮಾನಗಳನ್ನು ನಾನೇ ತಿಳಿದುಕೊಂಡಿಂದೆ. ನನಗೆ ಆ ದಾವೆಯ ಎಲ್ಲಾ ವಿದ್ಯಾಮಾನ ಗೊತ್ತಿದ್ದರೂ ಸಹ ಅದರ ಬಗ್ಗೆ ಆಸಕ್ತಿ ತೋರಿಸಿಲ್ಲ ಎಂದರೆ ಸರಿಯಲ್ಲ. ಆಗ ಕೋರೋನಾ ಇತ್ತು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಆಸಕ್ತಿ ತೋರಿಸಿದ್ದಲ್ಲಿ ದಾವೆ ವಜಾ ಗೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಬದಲಾಗಿ ನಾನು ಏಕೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನನಗೆ ಗೊತ್ತು. ನಿಪಿ **-1** ರ ದಾಖಲೆಗೆ ನನ್ನ ತಾಯಿಯನ್ನು ವಕೀಲರ ಬಳಿ ಕರೆದುಕೊಂಡು ಬಂದು ಸಹಿ ಹಾಕಿಸಿದ್ದೇನೆ. ನಿಪಿ-**1** ಕ್ಕೆ ನನ್ನ ತಾಯಿಯೇ ಬಂದು ಸಹಿ ಹಾಕಿರುವ ಕಾರಣ ನ್ಯಾಯಲಯಕ್ಕೆ ಹಾಜರಾಗಿ ಸಾಕ್ಷಿ ನುಡಿಯಲು ಅವರಿಗೆ ತೊಂದರೆ ಇಲ್ಲ ಎಂದರೆ ತೊಂದರೆ ಇತ್ತು. ಏನು ತೊಂದರೆ ಇತ್ತು ಎಂದರೆ ಅವರಿಗೆ ಬಿಪಿ , ಸಕ್ಕರೆ ಖಾಯಿಲೆ ಇತ್ತು ಹಾಗೂ ಕೋರೋನಾ ಸಮಯವಾಗಿತ್ತು. ನನ್ನ ತಾಯಿಗೆ ಬಿಪಿ , ಸಕ್ಕರೆ ಖಾಯಿಲೆ ಇತ್ತು ಎಂಬ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ತಾಯಿ ಆರೋಗ್ಯವಾಗಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಬಂದು ಸಾಕ್ಷಿ ಹೇಳಿದರೆ ನಿಜಾಂಶ ಗೊತ್ತಾಗುತ್ತದೆ ಎಂದು ಸತ್ಯವನ್ನು ಮರೆಮಾಚಲು ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ **82/2018** ರಲ್ಲಿ ನ್ಯಾಯಾಲಯ ಸಾಕಷ್ಟು ಕಾಲಾವಕಾಶ ನಮಗೆ ನೀಡಿತ್ತು ಎಂದರೆ ಕೇವಲ **3** ಕಾಲವಕಾಶ ನೀಡಿತ್ತು. ನ್ಯಾಯಾಲಯ ತಿದ್ದುಪಡಿ ಮಾಡಲು ಮತ್ತು ಆದೇಶವನ್ನು ಪಾಲಿಸಲು ಸಾಕಷ್ಟು ಕಾಲಾವಕಾಶ ನೀಡಿತ್ತು ಎಂದರೆ ಸರಿಯಲ್ಲ. ಸಾಕಷ್ಟು ಕಾಲಾವಕಾಶ ನೀಡಿಯೂ ಕೂಡ ಆದೇಶವನ್ನು ಪಾಲಿಸದೇ ಇರುವ ಕಾರಣ ಈ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡಬೇಕೆಂದು ಈ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಸಹಿ/-

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.